<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಹುಣಸೂರು.</u>

**ಸಿ.ಸಿ. ಸಂಖ್ಯೆ: 620/2014**

**ಸಾಕ್ಷಿಯನ್ನು ದಿಃ 08.11.2023 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

ಹೆಸರು ಸತೀಶ್ ಕುಮಾರ್ ಸಿ.ಡಬ್ಲ್ಯೂ: **31** ಪಿ.ಡಬ್ಲ್ಯೂ: **18**

ತಂದೆಯ ಹೆಸರು ಸಡೆಯಪ್ಪನ್

ವಯಸ್ಸು **38** ವರ್ಷ

ಕೆಲಸ ವೈಸ್ ಪ್ರೆಸಿಡೆಂಟ್, ಬಳ್ಳಾರಿಯಮ್ಮ ಶುಗರ್ ಲಿ.

ವಾಸಸ್ಥಳ ನಂಜನಗೂಡು

<u>ಮುಖ್ಯ ವಿಚಾರಣೆ: ಮಾನ್ಯ ಸಸಅ ರವರಿಂದ:</u>

1. 2013 ರಲ್ಲಿ ಪೊಲೀಸರು ನನಗೆ ರಾಜಮ್ಮ ಕೋಂ ಜಗನ್ನಾಥ್, ಕ್ಯಾತನಹಳ್ಳಿ ಗ್ರಾಮ, ಹೆಚ್.ಡಿ.ಕೋಟೆ ಅವರಿಗೆ ಸಂಬಂಧಪಟ್ಟಂತೆ ವಿವರಣೆ ಕೇಳಿದ್ದು, ಆ ಪ್ರಕಾರ ನಾನು ದಿ:19.11.2010 ರಿಂದ ದಿ:21.11.2010 ವರೆಗೆ ಸದರಿಯವರ 2.09 ಎಕರೆ ಜಮೀನಿನಿಂದ ನಮ್ಮ ಕಾರ್ಖಾನೆಗೆ 48.465 ಕೆ.ಜಿ. ಕಬ್ಬನ್ನು ಸರಬರಾಜು ಮಾಡಿದ್ದು, ಆ ಬಗ್ಗೆ ನಾನು 07.12.2010 ರಲ್ಲಿ ಎಸ್.ಬಿ.ಎಮ್. ಚೆಕ್ ಅನ್ನು ನಾವು 57,783 ರೂ. ಹಣದ ಚೆಕ್ ಅನ್ನು ರಾಜಮ್ಮ ಅವರ ಹೆಸರಿಗೆ ಕರ್ನಾಟಕ ಬ್ಯಾಂಕ್ ಲಿ. ಸದರಿಯವರ ಅಕೌಂಟ್ ಸಂ.764262 ನಂಬರಿಗೆ ನೀಡಿರುತ್ತೇವೆ. ಆ ಬಗ್ಗೆ ನಾನು ಪೊಲೀಸರಿಗೆ ಲೆಡ್ಜರ್ ಅಬ್ಸಾಸ್ಟ್ರಾಕ್ಟ್, ಬ್ಯಾಂಕ್ ಡಿಸ್ಪಾಚ್ ಡಿಟೈಲ್ಸ್ ಹಾಗೂ ರೈತರ ಕರಾರು ಪತ್ರ ನೀಡಿರುತ್ತೇನೆ. ಸದರಿ ದಾಖಲಾತಿಗಳು ನ್ಯಾಯಾಲಯದ ಕಡತದಲ್ಲಿ ಇಲ್ಲದೆ ಇರುವುದರಿಂದ ನಿಶಾನೆಗೊಳಪಡಿಸಿಲ್ಲ.

**2.** ನಂತರ ನನಗೆ ಆರೋಪಿ ಕರ್ನಾಟಕ ಬ್ಯಾಂಕ್ ನಲ್ಲಿ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು ರಾಜಮ್ಮ ಕೋಂ ಜಗನ್ನಾಥ್ ಅವರ ಅಕೌಂಟ್ ಗೆ ನಾವು ನೀಡಿದ 57,783 ಹಣದ ಚೆಕ್ ಅನ್ನು ರಾಜಮ್ಮ ಕೋಂ ಶಿವೇಗೌಡ ಅವರ ಅಕೌಂಟ್ ಗೆ ಜಮಾ ಮಾಡಿ ತಮ್ಮ ಸ್ವಂತಕ್ಕೆ ಬಳಸಿಕೊಂಡಿರುತ್ತಾರೆ ಎಂದು ತಿಳಿದುಬಂದಿರುತ್ತದೆ.

<u>ಪಾಟೀಸವಾಲು: ಆರೋಪಿ ಪರ ವಕೀಲರಾದ ಶ್ರೀ ಡಿ.ವಿ.ಎಸ್ ವಕೀಲರಿಂದ ಪಿ.ಎಲ್.ಕೆ. ವಕೀಲರ ಪರವಾಗಿ-</u>

3. ಆರೋಪಿ ಹಣವನ್ನು ತನ್ನ ಸ್ವಂತಕ್ಕೆ ಬಳಸಿಕೊಂಡಿರುತ್ತಾರೆ ಎಂದು ನನಗೆ ಪೊಲೀಸರಿಂದ ತಿಳಿದುಬಂದಿರುತ್ತದೆ. ಆರೋಪಿ ಯಾವುದೇ ತಪ್ಪು ಮಾಡಿಲ್ಲ , ನಾನು ಪೊಲೀಸರ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ನಾನು ಇದೇ ಮೊದಲ ಬಾರಿ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ವಿಚಾರವನ್ನು ನಾನು ಇದೇ ಮೊದಲ ಬಾರಿ ನುಡಿದಿರುತ್ತೇನೆ ಎಂದರೆ ಸರಿ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.